# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು

ಸಂಖ್ಯೆ:ಆ/ಪಿಎಸ್‌ಆರ್(ಜ)/2011 /2019-20 ದಿನಾಂಕ: 02/08/2019

## ಕಛೇರಿ ಆದೇಶ

ವಿಷಯ: ಪಾಲಿಕೆಯ ಪರವಾನಗಿಯೊಂದಿಗೆ ಓ.ಎಫ್.ಸಿ.ಯನ್ನು ಭೂಗತವಾಗಿ ಅಳವಡಿಸಿ ಕಾರಣಾಂತರಗಳಿಂದ ಓ.ಎಫ್.ಸಿ. ತುಂಡಾಗಿದ್ದು ದುರಸ್ತಿ ಸಾಧ್ಯವಾಗದ ಪಕ್ಷದಲ್ಲಿ ಹೊಸದಾಗಿ ಓ.ಎಫ್.ಸಿ. ಡಕ್ಟ್ ಅಳವಡಿಸಲು ಅನುಮತಿ ನೀಡುವ ಬಗ್ಗೆ

ಉಲ್ಲೇಖ:
1. ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 13-10-2017ರ ವಿಷಯ ಸಂಖ್ಯೆ:ತೆಆಸ್ಥಾಸ/113/2017-18ರ ನಿರ್ಣಯ
2. ಪಾಲಿಕೆ ಕೌನ್ಸಿಲ್ ಸಭೆಯ ದಿನಾಂಕ 29-06-2018ರ ವಿಷಯ ಸಂಖ್ಯೆ:02(247)/2017-18ರ ನಿರ್ಣಯ
3. ಆಯುಕ್ತರ ಕಛೇರಿ ಆದೇಶ ಸಂಖ್ಯೆ ಆಯುಕ್ತರು ಪಿಎಸ್‌ಆರ್(ಜ)/2684/2018-19 ದಿನಾಂಕ 17-09-2018

### ಪ್ರಸ್ತಾವನೆ

ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಓ.ಎಫ್.ಸಿ. ಅಳವಡಿಕೆ ಸಂದರ್ಭದಲ್ಲಿ ಶುಲ್ಕ, ದಂಡ ಮತ್ತು ನಿಯಮಾವಳಿಗಳು ಜಾರಿಯಲ್ಲಿದ್ದು ಕೆ.ಎಂ.ಸಿ. ಕಾಯ್ದೆಯ ಅನ್ವಯ ಸದರಿ ಶುಲ್ಕ, ದಂಡ ಮತ್ತು ನಿಯಮಾವಳಿಗಳಿಗೆ ಶಾಸನಾತ್ಮಕ ಅನುಮೋದನೆಯನ್ನು ಪಾಲಿಕೆಯ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆಗಳಿಂದ ಪಡೆದಿರುವ ಬಗ್ಗೆ ನ್ಯಾಯಲಯಗಳಲ್ಲಿ ವಿಚಾರಣೆಯ ಸಂದರ್ಭಗಳಲ್ಲಿ ಹಲವಾರು ಬಾರಿ ಚರ್ಚೆ ಆಗಿರುತ್ತದೆ. ಅಲ್ಲದೇ ಅನಧಿಕೃತ ಓ.ಎಫ್.ಸಿ ಅಳವಡಿಕೆ ಅಥವಾ ಓ.ಎಫ್.ಸಿ. ಅಳವಡಿಕೆಯ ಅನುಮತಿಯಲ್ಲಿ ಉಲ್ಲೇಖಿಸಿರುವ ಷರತ್ತುಗಳ ಉಲ್ಲಂಘನೆಯ ಸಂದರ್ಭಗಳಲ್ಲಿ ವಿಧಿಸಬೇಕಿರುವ ದಂಡದ ಬಗ್ಗೆ ಗೊಂದಲವಿರುತ್ತದೆ. ಇದರಿಂದಾಗಿ ಅನಿಯಂತ್ರಿತ ರೀತಿಯಲ್ಲಿ ದಂಡ ವಿಧಿಸಲಾಗುತ್ತಿದ್ದು ಇದರಿಂದಾಗಿ ದಂಡ ವಸೂಲಾತಿಗೆ ಸಮಸ್ಯೆಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಉಲ್ಲೇಖ 1 ಮತ್ತು 2ರಂತೆ ಅನುಮೋದನೆ ಪಡೆದು ಓ.ಎಫ್.ಸಿ. ಅಳವಡಿಕೆ ಸಂದರ್ಭದಲ್ಲಿ ಶುಲ್ಕ, ದಂಡ ಮತ್ತು ನಿಯಮಾವಳಿಗಳ ಬಗ್ಗೆ ವಿಸ್ತೃತವಾಗಿ ಆದೇಶ ಉಲ್ಲೇಖ 3ರಂತೆ ಹೊರಡಿಸಲಾಗಿರುತ್ತದೆ.

ಸದರಿ ಆದೇಶದಲ್ಲಿ ಪಾಲಿಕೆಯ ಪರವಾನಗಿಯೊಂದಿಗೆ ಓ.ಎಫ್.ಸಿ.ಯನ್ನು ಭೂಗತವಾಗಿ ಅಳವಡಿಸಿ ಕಾರಣಾಂತರಗಳಿಂದ ಓ.ಎಫ್.ಸಿ. ತುಂಡಾಗಿದ್ದು ದುರಸ್ತಿ ಸಾಧ್ಯವಾಗದ ಪಕ್ಷದಲ್ಲಿ ಹೊಸದಾಗಿ ಓ.ಎಫ್.ಸಿ. ಡಕ್ಟ್ ಅಳವಡಿಸಲು ಡಕ್ಟ್‌ಗೆ ನಿಗದಿತ ಪರವಾನಗಿ ಶುಲ್ಕ, ಮೇಲ್ವಿಚಾರಣೆ ಶುಲ್ಕ ಮತ್ತು ಭದ್ರತಾ ಠೇವಣಿ ಹೊಸದಾಗಿ ಪಡೆದು ಪರವಾನಗಿ ನೀಡುವುದು ಎಂದು ಸೂಚಿಸಲಾಗಿದೆ. ಅಲ್ಲದೇ ಅದೇ ಆದೇಶದಲ್ಲಿ ಟೆಲಿಕಾಂ, ನಾನ್-ಟೆಲಿಕಾಂ ಮತ್ತು ಇಂಟರ್ನೆಟ್ ಸೇವಾ ಸಂಸ್ಥೆಗಳಿಗೆ ಹೆಚ್.ಡಿ.ಡಿ. ಮಾದರಿಯಲ್ಲಿ ಓ.ಎಫ್.ಸಿ. ಡಕ್ಟ್ ಅಳವಡಿಕೆಗೆ ಒಂದು ಸಲಕ್ಕೆ ಮೂರಕ್ಕಿಂತ ಹೆಚ್ಚು ಡಕ್ಟ್ ಅಳವಡಿಸುತ್ತಿದ್ದರೆ ಪ್ರತಿ ಹೆಚ್ಚುವರಿ ಡಕ್ಟ್‌ಗೆ ರೂ.100/- ಶುಲ್ಕವನ್ನು ನಿಗದಿ ಮಾಡಲಾಗಿದೆ. ಅಲ್ಲದೇ ಟೆಲಿಕಾಂ, ನಾನ್-ಟೆಲಿಕಾಂ ಮತ್ತು ಇಂಟರ್ನೆಟ್ ಸೇವಾ ಸಂಸ್ಥೆಗಳಿಗೆ ಓ.ಎಫ್.ಸಿ. ಡಕ್ಟ್ ಅಳವಡಿಕೆಗೆ ಅಳವಡಿಕೆ ಶುಲ್ಕದ 25%ನ್ನು ಭದ್ರತಾ ಠೇವಣಿಯಾಗಿ ನಿಗದಿಗೊಳಿಸಲಾಗಿದೆ. ಆನಂತರದಲ್ಲಿ ಹಲವು ಓ.ಎಫ್.ಸಿ. ಸಂಸ್ಥೆಗಳು ಸದರಿ ಮೊತ್ತವನ್ನು ಪಾವತಿಸಿ ಮೇಲ್ಮಟ್ಟದಲ್ಲಿರುವ ಓ.ಎಫ್.ಸಿ.ಯನ್ನು ಭೂಗತವಾಗಿ ಸ್ಥಳಾಂತರಿಸಲು ಮುಂದೆ ಬಂದಿರುತ್ತವೆ. ಅಲ್ಲದೇ ಸರ್ಕಾರದ ಮಾನ್ಯ ಮುಖ್ಯ ಕಾರ್ಯದರ್ಶಿಗಳು ಸಮನ್ವಯ ಸಮಿತಿ ಸಭೆಯಲ್ಲಿ ಮತ್ತು ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆರವರು ಸಹ ಹಲವು ಸಂದರ್ಭಗಳಲ್ಲಿ ಮೇಲ್ಮಟ್ಟದ ಕೇಬಲ್‌ಗಳನ್ನು ಭೂಗತವಾಗಿ ಆದಷ್ಟು ಬೇಗ ಸ್ಥಳಾಂತರಿಸಲು ಸೂಚಿಸಿರುತ್ತಾರೆ. ಈ

ಹಿನ್ನೆಲೆಯಲ್ಲಿ ಉಲ್ಲೇಖ 3ರ ಆಯುಕ್ತರ ಕಛೇರಿ ಆದೇಶ ಸಂಖ್ಯೆ ಆಯುಕ್ತರು ಪಿಎಸ್‌ಆರ್(ಜಿ)/2684/2018-19 ದಿನಾಂಕ 17-09-2018 ಆದೇಶಕ್ಕೆ ಪೂರಕವಾಗಿ ಮತ್ತು 17-09-2018ರಿಂದ ಪೂರ್ವಾನ್ವಯವಾಗುವಂತೆ ಈ ಕೆಳಗಿನಂತೆ ಆದೇಶಿಸಿದೆ.

## ಆದೇಶ

ಪಾಲಿಕೆಯ ಪರವಾನಗಿಯೊಂದಿಗೆ ಓ.ಎಫ್.ಸಿ.ಯನ್ನು ಭೂಗತವಾಗಿ ಅಳವಡಿಸಿ ಕಾರಣಾಂತರಗಳಿಂದ ಓ.ಎಫ್.ಸಿ. ತುಂಡಾಗಿದ್ದು ದುರಸ್ತಿ ಸಾಧ್ಯವಾಗದ ಪಕ್ಷದಲ್ಲಿ ಹೊಸದಾಗಿ ಓ.ಎಫ್.ಸಿ. ಡಕ್ಟ್ ಅಳವಡಿಸಲು ಪ್ರತಿ ಡಕ್ಟ್‌ಗೆ ನಿಗದಿತ ಪರವಾನಗಿ ಶುಲ್ಕ ರೂ.100/- ಪ್ರತಿ ಮೀಟರ್, ಮೇಲ್ವಿಚಾರಣೆ ಶುಲ್ಕ ರೂ.100/- ಪ್ರತಿ ಮೀಟರ್, ಮತ್ತು ಭದ್ರತಾ ಠೇವಣಿ ರೂ.25/- ಪ್ರತಿ ಮೀಟರ್ ಪಡೆದುಕೊಂಡು ಕಡ್ಡಾಯವಾಗಿ ಜುರಿಸ್‌ಡಿಕ್ಷನಲ್ ಇಂಜಿನಿಯರ್‌ಗಳ ಉಪಸ್ಥಿತಿಯಲ್ಲಿ ಓ.ಎಫ್.ಸಿ. ಅಳವಡಿಸುವ ಮತ್ತು ಹೊಸದಾಗಿ ಡಾಂಬರೀಕರಣ ಮಾಡಿರುವ ರಸ್ತೆಗಳನ್ನು ಯಾವುದೇ ಸಂದರ್ಭದಲ್ಲಿ ಒಂದು ವರ್ಷದವರೆಗೆ ಅಗೆಯದ ಮತ್ತು ಇತರ ಸಾಮಾನ್ಯ ಓ.ಎಫ್.ಸಿ. ಅಳವಡಿಕೆ ಪರತ್ತಿಗೆ ಒಳಪಟ್ಟು ಇಂತಹ ಪ್ರಕರಣಗಳು ವಿಶೇಷ ಪ್ರಕರಣಗಳಾಗಿರುವ ಹಿನ್ನೆಲೆಯಲ್ಲಿ ವಿಶೇಷ ಆಯುಕ್ತರು(ಯೋಜನೆ)ರವರ ಮೂಲಕ ಆಯುಕ್ತರ ವಿಶೇಷ ಅನುಮತಿಯೊಂದಿಗೆ ಮಾತ್ರ ನೀಡತಕ್ಕದ್ದು.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿ:

1. ವಿಶೇಷ ಆಯುಕ್ತರು, ಯೋಜನೆ/ಹಣಕಾಸು
2. ಪ್ರಧಾನ ಅಭಿಯಂತರರು
3. ಮುಖ್ಯ ಅಭಿಯಂತರರು (ಓ.ಎಫ್.ಸಿ.ಕೋಶ) ಸೂಕ್ತ ಕ್ರಮಕ್ಕಾಗಿ
4. ಮುಖ್ಯ ಅಭಿಯಂತರರು (ರಸ್ತೆ ಮೂಲಭೂತ ಸೌಕರ್ಯ) ಸೂಕ್ತ ಕ್ರಮಕ್ಕಾಗಿ
5. ಎಲ್ಲಾ ವಲಯಗಳ ಜಂಟಿ ಆಯುಕ್ತರು ಮತ್ತು ಮುಖ್ಯ ಅಭಿಯಂತರರಿಗೆ ಸೂಕ್ತ ಕ್ರಮಕ್ಕಾಗಿ
6. ಪಾಲಿಕೆಯ ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ -. ಪಾಲಿಕೆಯ ಜಾಲತಾಣದಲ್ಲಿ ಕಛೇರಿ ಆದೇಶವನ್ನು ಪ್ರಚುರಪಡಿಸುವುದಕ್ಕಾಗಿ.
7. ಕಛೇರಿ ಕಡತಕ್ಕೆ.